ಸುದ್ದಿ ಸಂಚಯ

# ವಿವೇಕಾನಂದ ಮಾನವ ಉತ್ಕೃಷ್ಟತಾ ಸಂಸ್ಥೆ

### ಮಾನವ-ಉತ್ಕೃಷ್ಟತೆ ಎಂದರೇನು?

ಮಾನವರೆಲ್ಲರಲ್ಲಿಯೂ ದೈವಿಕತೆ ಹಾಗೂ ಪರಿಪೂರ್ಣತೆ ಅಂತರ್ನಿಹಿತವಾಗಿದೆ. ಸರ್ವೋತ್ಕೃಷ್ಟವಾದ ಈ ಗುಣಗಳು ಅವರಲ್ಲಿ ಪ್ರಕಾಶಗೊಳ್ಳುವಂತೆ ಮಾಡುವುದೇ ಶಿಕ್ಷಣದ ಹಾಗೂ ಧರ್ಮದ ಉದ್ದೇಶ. ವ್ಯಕ್ತಿಗಳಲ್ಲಿ ಭೌತಿಕ, ಬೌದ್ಧಿಕ ಹಾಗೂ ಆಧ್ಯಾತ್ಮಿಕ—ಈ ಆಯಾಮಗಳು ಸಂಪೂರ್ಣವಾಗಿ ಅರಳಿದಾಗ ಮಾತ್ರವೇ ಅಂಥವರು ಉತ್ಕೃಷ್ಟತೆಯನ್ನು ಸಾಧಿಸಿದ ವ್ಯಕ್ತಿಗಳೆಂದು ಕರೆಯಲ್ಪಡುತ್ತಾರೆ. ನಮ್ಮೆಲ್ಲ ಪ್ರಯತ್ನಗಳು ಈ ದಿಕ್ಕಿನಲ್ಲಿಯೇ ಸಾಗುವಂತೆ ನೋಡಿಕೊಳ್ಳಬೇಕು.

ನಮ್ಮಲ್ಲಿಂದು ಲಭ್ಯವಿರುವ ಶಿಕ್ಷಣ ಪದ್ಧತಿ ದುರದೃಷ್ಟವಶಾತ್ ಹೆಚ್ಚು ಹೆಚ್ಚು ಮಾಹಿತಿ ಸಂಗ್ರಹಣೆಯತ್ತ ಸಾಗುತ್ತಿದೆಯೇ ಹೊರತು, ಬದುಕಿನಲ್ಲಿ ಒಳನೋಟವನ್ನು ಪಡೆಯುವ ಸ್ಫೂರ್ತಿಯಿಂದ ಪ್ರೇರಿತವಾಗಿಲ್ಲ.

### ವಿವೇಕಾನಂದ ಮಾನವ ಉತ್ಕೃಷ್ಟತಾ ಸಂಸ್ಥೆ

ಇಂದಿನ ಶಿಕ್ಷಣ ಪದ್ಧತಿಯಲ್ಲಿರುವ ಕೊರತೆಗಳನ್ನು ತುಂಬಲು ಮಕ್ಕಳಿಗೆ, ಯುವಕರಿಗೆ, ಶಿಕ್ಷಕರಿಗೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಪರಿಣತಿಯನ್ನು ಪಡೆದಿರುವ ತಂಡಗಳಿಗೆ, ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ಪ್ರಾಥಮಿಕ ಜ್ಞಾನವನ್ನು ಮೂಡಿಸಲು ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಈ ಸಂಸ್ಥೆಯಲ್ಲಿ ನಡೆಸುವ ಗುರಿ ಇಟ್ಟುಕೊಳ್ಳಲಾಗಿದೆ.

ಎಲ್ಲ ಕ್ಷೇತ್ರಗಳಲ್ಲಿ ಉತ್ಕೃಷ್ಟತೆಯನ್ನು ಸಾಧಿಸಲು ಸಹಾಯಕವಾಗುವುದು ಶಾರೀರಿಕ ಆರೋಗ್ಯ. ಅದರ ಗಳಿಕೆಗೆ ಯೋಗಾಸನಗಳ ತರಗತಿಗಳನ್ನು ಈ ಕೇಂದ್ರವು ಸದ್ಯಕ್ಕೆ ನಡೆಸುವುದು. ಅದರ ಜೊತೆ ಜೊತೆಗೇ, ೧. ಆಧ್ಯಾತ್ಮಿಕ ಶಕ್ತಿ ವ್ಯಕ್ತಿತ್ವದಲ್ಲಿ ಪ್ರಕಾಶಗೊಳ್ಳಲು ಧ್ಯಾನದ ಬಗ್ಗೆ ಸರಳವಾದ ಪ್ರಾಯೋಗಿಕ ಸಲಹೆಗಳನ್ನು ಕೊಡಲಾಗುವುದು; ೨. ಪರಿಣತ ವಿದ್ವಾಂಸರಿಂದ ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ನಿತ್ಯ ತರಗತಿಗಳನ್ನು ನಡೆಸಲಾಗುವುದು; ೩. ಪ್ರತಿಯೊಂದು ಧರ್ಮದಲ್ಲಿನ ಶ್ರೇಷ್ಠತೆಯ ಅರಿವು ಮತ್ತು ಧರ್ಮಸಮನ್ವಯಗಳಿಗೆ ಒತ್ತುಕೊಡುವ ಜಗತ್ತಿನ ವಿವಿಧ ಧರ್ಮಗಳ ತುಲನಾತ್ಮಕ ಅಧ್ಯಯನವನ್ನು ಈ ಕೇಂದ್ರ ಕೈಗೊಳ್ಳುವುದು; ೪. ಮಕ್ಕಳಿಗೆ ಹಾಗೂ ಯುವಕರಿಗೆ ಪೇರಿನಿ ಶಿವತಾಂಡವ ನೃತ್ಯ, ಭಕ್ತಿಸಂಗೀತ, ವಾದ್ಯಗಳನ್ನು ನುಡಿಸುವುದು, ಚಿತ್ರಕಲೆ, ಮುಂತಾದವುಗಳಲ್ಲಿ ತರಬೇತಿಗಳನ್ನು ಕೊಡುವುದು ಮತ್ತು ೫. ಮಾನವರೆಲ್ಲ ಭಗವಂತನ ಪ್ರತಿರೂಪಗಳೆಂದು ಬಗೆದು ಅವರ ಸೇವೆಯಲ್ಲಿ ತೊಡಗಿ **'ಶಿವಭಾವದಿಂದ ಜೀವ ಸೇವೆ'** ಎಂಬ ತತ್ತ್ವವನ್ನು ಆಚರಣೆಯಲ್ಲಿ ತರಲು ತರಬೇತಿಯನ್ನು ಕೊಡಲಾಗುವುದು.




**ಹೈದರಾಬಾದ್ ರಾಮಕೃಷ್ಣ ಮಠದ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ವಿವೇಕಾನಂದ ಮಾನವ ಉತ್ಕೃಷ್ಟತಾ ಸಂಸ್ಥೆಯ ಭವ್ಯ ಕಟ್ಟಡದ ನೋಟ**

### ಸಂಸ್ಥೆಯ ಉದ್ಘಾಟನೆ

ಹೈದರಾಬಾದಿನ ರಾಮಕೃಷ್ಣ ಮಠದಲ್ಲಿ, ವಿವೇಕಾನಂದ ಮಾನವ ಉತ್ಕೃಷ್ಟತಾ ಸಂಸ್ಥೆಯನ್ನು ಸೆಪ್ಟೆಂಬರ್ ೧ರಂದು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಅಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ರಂಗನಾಥಾನಂದಜೀಯವರು ಉದ್ಘಾಟಿಸಿದರು. ವೇದಘೋಷಗಳ ನಡುವೆ ಸ್ವಾಮಿ ವಿವೇಕಾನಂದರ ಪ್ರತಿಮೆಯ ಮುಂದೆ, ಜ್ಯೋತಿಯನ್ನು ಬೆಳಗುವುದರ ಮೂಲಕ ಸಂಸ್ಥೆಯ ಉದ್ಘಾಟನೆಯನ್ನು ಘೋಷಿಸಿದ ಪರಮಪೂಜ್ಯ ಸ್ವಾಮೀಜಿಯವರು ತಮ್ಮ ಆಶೀರ್ವಚನದಲ್ಲಿ, 'ಮಾನವನವರೆಗೂ ಜೈವಿಕವಿಕಾಸವಾಗುತ್ತಲೇ ಬಂದಿದೆ.ಆದರೆ ಅವನನ್ನು ಇತರೆ ಪ್ರಾಣಿಗಳಿಂದ ಭಿನ್ನವಾಗಿಸುವುದು ತನಗೆ ವಿಶಿಷ್ಟವಾಗಿರುವ ಬುದ್ಧಿಯನ್ನು ಅವನು ಬೆಳೆಸಿಕೊಳ್ಳುವುದರಿಂದ. ಮನುಷ್ಯನ ಸ್ವಾರ್ಥಪರವಾದ "ಅಪಕ್ವ ಅಹಂ" "ಪಕ್ವ ಅಹಂ" ಆಗಿ ಪರಿವರ್ತಿತವಾದಾಗ ಅವನ ಪ್ರಜ್ಞೆ ವಿಕಾಸ ಹೊಂದಿ ಅವನಲ್ಲಿರುವ ದೈವಿಕತೆ ಪ್ರಕಾಶಗೊಂಡು, ಅವನು ಇತರರೊಂದಿಗೆ ಒಂದಾಗುವುದನ್ನು ಕಲಿಯುತ್ತಾನೆ ಮತ್ತು ತನ್ನ ಸಹಮಾನವರ ಸೇವೆಯಲ್ಲಿ ತೊಡಗಲು ಅವನಿಗೆ ಪ್ರೇರಣೆ ಸಿಗುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ಸ್ವಾಮಿ ವಿವೇಕಾನಂದರ ಬೋಧನೆಗಳಿಂದ ಪ್ರೇರಿತರಾದ